# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 784 |
| ಸದಸ್ಯರ ಹೆಸರು | ಶ್ರೀ ಮಧು ಜಿ ಮಾದೇಗೌಡ |
| ಉತ್ತರಿಸುವ ದಿನಾಂಕ | 21.02.2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ವತಿಯಿಂದ ರಾಜ್ಯದ ಭಕ್ತರ ಅನುಕೂಲಕ್ಕಾಗಿ ಹೊರ ರಾಜ್ಯಗಳ ಯಾವ ಯಾವ ಧಾರ್ಮಿಕ ಸ್ಥಳಗಳಲ್ಲಿ ಕರ್ನಾಟಕ ರಾಜ್ಯ ಛತ್ರಗಳು/ ಪ್ರವಾಸಿ ಭವನಗಳನ್ನು ನಿರ್ಮಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)</td><td>ಕರ್ನಾಟಕ ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ ವತಿಯಿಂದ ರಾಜ್ಯದ ಭಕ್ತರ ಅನುಕೂಲಕ್ಕಾಗಿ ಹೊರ ರಾಜ್ಯಗಳಲ್ಲಿರುವ ಈ ಕೆಳಕಂಡ ಧಾರ್ಮಿಕ ಕ್ಷೇತ್ರಗಳಲ್ಲಿ ಕರ್ನಾಟಕ ರಾಜ್ಯ ಛತ್ರ/ಪ್ರವಾಸಿ ಭವನಗಳನ್ನು ನಿರ್ಮಿಸಲಾಗಿದೆ.
<table>
<tr><th>ಕ್ರ. ಸಂ.</th><th>ಹೊರ ರಾಜ್ಯ</th><th>ಕ್ರ.ಸಂ.</th><th>ಶ್ರೀಕ್ಷೇತ್ರ</th></tr>
<tr><td rowspan="4">(1)</td><td rowspan="4">ಆಂಧ್ರಪ್ರದೇಶ</td><td>(1)</td><td>ತಿರುಮಲ,</td></tr>
<tr><td>(2)</td><td>ತಿರುಚಾನೂರು</td></tr>
<tr><td>(3)</td><td>ಮಂತ್ರಾಲಯ,</td></tr>
<tr><td>(4)</td><td>ಶ್ರೀಶೈಲಂ</td></tr>
<tr><td>(2)</td><td>ಮಹಾರಾಷ್ಟ್ರ</td><td>(1)</td><td>ತುಳಜಾಪುರ</td></tr>
<tr><td>(3)</td><td>ಉತ್ತರಪ್ರದೇಶ</td><td>(1)</td><td>ವಾರಣಾಸಿ</td></tr>
</table>
</td></tr>
<tr><td>(ಆ)</td><td>ಇಲ್ಲಿನ ಕರ್ನಾಟಕ ರಾಜ್ಯ ಛತ್ರಗಳು/ಪ್ರವಾಸಿ ಭವನಗಳಲ್ಲಿ ರಾಜ್ಯದ ಭಕ್ತರು ಉಳಿದುಕೊಳ್ಳಲು ಅಥವಾ ವಾಸ್ತವ್ಯಕ್ಕೆ ಕೊಠಡಿಗಳನ್ನು ಮುಂಚಿತವಾಗಿ ಕಾಯ್ದಿರಿಸಲು ಅನುಸರಿಸಬೇಕಾದ ಕ್ರಮಗಳೇನು; ಯಾರನ್ನು ಸಂಪರ್ಕಿಸಬೇಕು; (ವಿಳಾಸ, ಸಂಪರ್ಕ ಸಂಖ್ಯೆ, ಇ-ಮೇಲ್ ವಿಳಾಸವನ್ನು ಒಳಗೊಂಡಂತೆ ಸಂಪೂರ್ಣ ಮಾಹಿತಿ ನೀಡುವುದು)</td><td>ಹೊರ ರಾಜ್ಯಗಳಲ್ಲಿರುವ ಕರ್ನಾಟಕ ರಾಜ್ಯ ಛತ್ರಗಳು/ಪ್ರವಾಸಿ ಭವನಗಳಲ್ಲಿ ರಾಜ್ಯದ ಭಕ್ತರು ಉಳಿದುಕೊಳ್ಳಲು ಅಥವಾ ವಾಸ್ತವ್ಯಕ್ಕೆ ಕೊಠಡಿಗಳನ್ನು ಮುಂಚಿತವಾಗಿ ಕಾಯ್ದಿರಿಸಲು ಅನುಸರಿಸಬೇಕಾದ ಕ್ರಮಗಳು ಮತ್ತು ಸಂಪರ್ಕಿಸಬೇಕಾದ ಅಧಿಕಾರಿಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.</td></tr>
<tr><td>(ಇ)</td><td>ಕರ್ನಾಟಕ ಸರ್ಕಾರವು ಬೇರೆ ಯಾವ ರಾಜ್ಯಗಳ ಧಾರ್ಮಿಕ ಸ್ಥಳಗಳಲ್ಲಿ ಕರ್ನಾಟಕ ರಾಜ್ಯ ಛತ್ರಗಳು/ಪ್ರವಾಸಿ ಭವನಗಳನ್ನು ನಿರ್ಮಿಸುತ್ತಿದೆ ಅಥವಾ ನಿರ್ಮಿಸಲು ಉದ್ದೇಶಿಸಿದೆ; ಇದಕ್ಕಾಗಿ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ; (ಸಂಪೂರ್ಣ ವಿವರ ನೀಡುವುದು)</td><td>ಕರ್ನಾಟಕ ಸರ್ಕಾರವು ಮಹಾರಾಷ್ಟ್ರ ರಾಜ್ಯದ ಸಾಂಗ್ಲಿ ಜಿಲ್ಲೆಯ ಜತ್ ತಾಲ್ಲೂಕು ಶ್ರೀ ಕ್ಷೇತ್ರ ಗುಡ್ಡಾಪುರದಲ್ಲಿ ಕರ್ನಾಟಕ ರಾಜ್ಯ ಛತ್ರ / ಪ್ರವಾಸಿ ಭವನವನ್ನು ನಿರ್ಮಿಸಲಾಗುತ್ತಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಶ್ರೀಕ್ಷೇತ್ರ ಪಂಡರಾಪುರದಲ್ಲಿ ಕರ್ನಾಟಕ ರಾಜ್ಯ ಛತ್ರ(ಕರ್ನಾಟಕ ಭವನ)ವನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ.</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | (continued below) |

| ಕ್ರ.ಸಂ. | ನಿರ್ಮಿಸುತ್ತಿರುವ ಕಾಮಗಾರಿಗಳು | ಬಿಡುಗಡೆ ಮಾಡಿರುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| (1) | ಗುಡ್ಡಾಪುರ ಕರ್ನಾಟಕ ರಾಜ್ಯ ಛತ್ರ/ ಭವನ ನಿರ್ಮಾಣಕ್ಕಾಗಿ | 700-00 |
| (2) | ಪಂಡರಾಪುರ ಕರ್ನಾಟಕ ರಾಜ್ಯ ಛತ್ರ/ ಭವನ ನಿರ್ಮಾಣಕ್ಕಾಗಿ | 300-00 |

ಸದರಿ ನಿರ್ಮಿಸಲಾಗುತ್ತಿರುವ/ಉದ್ದೇಶಿತ ಭವನಗಳ ನಿರ್ಮಾಣಕ್ಕಾಗಿ ಅನುದಾನ ಮೀಸಲಿಟ್ಟಿರುವುದಿಲ್ಲ. ಆದರೆ, ಬಂಡವಾಳ ಲೆಕ್ಕ ಶೀರ್ಷಿಕೆಯಡಿ ಆರ್ಥಿಕ ಇಲಾಖೆಯು ಒದಗಿಸಬಹುದಾದ ಅನುದಾನದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಅವಕಾಶವಿರುತ್ತದೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಈ) | ಹೊರ ರಾಜ್ಯಗಳಲ್ಲಿರುವ ರಾಜ್ಯ ಛತ್ರಗಳ ನಿರ್ವಹಣೆ ಮತ್ತು ಇನ್ನಿತರೆ ಮೂಲಸೌಕರ್ಯ ಕಲ್ಪಿಸುವ ಕಾರ್ಯಗಳಿಗೆ ಕಳೆದ 03 ವರ್ಷಗಳಲ್ಲಿ ಒದಗಿಸಲಾಗಿರುವ ಅನುದಾನ ಎಷ್ಟು; (ವರ್ಷವಾರು ಮಾಹಿತಿ ನೀಡುವುದು) | ಹೊರ ರಾಜ್ಯಗಳಲ್ಲಿರುವ ರಾಜ್ಯ ಛತ್ರಗಳ ನಿರ್ವಹಣೆ ಮತ್ತು ಇನ್ನಿತರೆ ಮೂಲಸೌಕರ್ಯ ಕಲ್ಪಿಸುವ ಕಾರ್ಯಗಳಿಗೆ **ಕಳೆದ 03 ವರ್ಷಗಳಲ್ಲಿ** ಒದಗಿಸಲಾಗಿರುವ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ:- |

| **ಹೊರ ರಾಜ್ಯ ಛತ್ರ** | **ವಿವರ** | **2020-21** | **2021-22** | **2022-23** | **ಒಟ್ಟು** |
|---|---|---|---|---|---|
| | | **(ರೂ.ಲಕ್ಷಗಳಲ್ಲಿ)** | | | |
| ತಿರುಮಲ | ಛತ್ರದ ನಿರ್ವಹಣೆಗೆ | | - | 100-00 | **100.00** |
| | ಮೂಲಭೂತ ಸೌಕರ್ಯ (ಅಭಿವೃದ್ಧಿ ಕಾಮಗಾರಿಗಳಿಗಾಗಿ) | 10000-00 | 10200-00 | - | **20200-00** |
| ಮಂತ್ರಾಲಯ | ಮೂಲಭೂತ ಸೌಕರ್ಯ (ಅಭಿವೃದ್ಧಿ ಕಾಮಗಾರಿಗಳಿಗಾಗಿ) | - | - | 400-00 | **400-00** |
| ಶ್ರೀಶೈಲಂ | ಮೂಲಭೂತ ಸೌಕರ್ಯ (ಅಭಿವೃದ್ಧಿ ಕಾಮಗಾರಿಗಳಿಗಾಗಿ) | - | - | 3375-00 | **3375-00** |
| ಗುಡ್ಡಾಪುರ | ಮೂಲಭೂತ ಸೌಕರ್ಯ (ಅಭಿವೃದ್ಧಿ ಕಾಮಗಾರಿಗಳಿಗಾಗಿ) | - | 200-00 | 500-00 | **700-00** |
| ಪಂಡರಾಪುರ | ಮೂಲಭೂತ ಸೌಕರ್ಯ (ಅಭಿವೃದ್ಧಿ ಕಾಮಗಾರಿಗಳಿಗಾಗಿ) | - | - | 300-00 | **300-00** |
| | **ಒಟ್ಟು** | **10000-00** | **10400-00** | **4675-00** | **25075-00** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಉ) | ಹೊರ ರಾಜ್ಯಗಳಲ್ಲಿರುವ ರಾಜ್ಯ ಛತ್ರಗಳ ಲೆಕ್ಕ ಪರಿಶೋಧನೆ ಕಾಲಕಾಲಕ್ಕೆ ಕೈಗೊಳ್ಳಲಾಗುತ್ತಿದೆಯೇ; ಒಂದು ವೇಳೆ ಲೆಕ್ಕ ಪರಿಶೋಧನೆ ಬಾಕಿ ಇದ್ದಲ್ಲಿ, ವಿವರ ನೀಡುವುದು? (ರಾಜ್ಯ ಛತ್ರವಾರು ಯಾವ ಸಾಲಿನಿಂದ ಯಾವ ಸಾಲಿನವರೆಗೆ ಬಾಕಿ ಇದೆ ಎನ್ನುವ ಬಗೆಗಿನ ಮಾಹಿತಿ ನೀಡುವುದು) | ಹೊರ ರಾಜ್ಯದಲ್ಲಿರುವ ರಾಜ್ಯ ಛತ್ರಗಳ ಲೆಕ್ಕ ಪರಿಶೋಧನೆಯನ್ನು ಸಕ್ಷಮ ಪ್ರಾಧಿಕಾರಿಯಾದ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಿಂದ ಕಾಲಕಾಲಕ್ಕೆ ಕೈಗೊಳ್ಳಲಾಗುತ್ತಿದೆ.<br><br>ಹೊರ ರಾಜ್ಯ ಛತ್ರಗಳವಾರು ಲೆಕ್ಕ ಪರಿಶೋಧನಾ ಬಾಕಿ ವಿವರ ಈ ಕೆಳಕಂಡಂತಿದೆ:- |

| ಕ್ರ. ಸಂ | ಹೊರ ರಾಜ್ಯ | ಬಾಕಿ ಲೆಕ್ಕ ಪರಿಶೋಧನೆಯ ಸಾಲು | ಷರಾ |
|---|---|---|---|
| 1 | ತಿರುಪತಿ-ತಿರುಮಲ | ಬಾಕಿ ಇರುವುದಿಲ್ಲ | 2018-19 ರಿಂದ 2022-23ರ ವರೆಗಿನ ಆಡಿಟ್ ಅನ್ನು ಜನವರಿ-2024 ಮಾಹೆಯಲ್ಲಿ ಮಾಡಲಾಗಿದ್ದು, ವರದಿ ಸ್ವೀಕೃತವಾಗಿಲ್ಲ. |
| 2 | ಮಂತ್ರಾಲಯ | 2021-22 ರಿಂದ 2022-23ರ ವರೆಗೆ ಬಾಕಿ ಇರುತ್ತದೆ. | 2020-21 ನೇ ಸಾಲಿನವರೆಗೂ ಆಡಿಟ್ ಆಗಿರುತ್ತದೆ. |
| 3 | ಶ್ರೀಶೈಲಂ | ಬಾಕಿ ಇರುವುದಿಲ್ಲ | 2018-19 ರಿಂದ 2022-23ರ ವರೆಗಿನ ಆಡಿಟ್ ಅನ್ನು ಫೆಬ್ರವರಿ-2024 ಮಾಹೆಯಲ್ಲಿ ಮಾಡಲಾಗಿದ್ದು, ವರದಿ ಸ್ವೀಕೃತವಾಗಿಲ್ಲ. |
| 4 | ವಾರಣಾಸಿ | ಬಾಕಿ ಇರುವುದಿಲ್ಲ | 2022-23ನೇ ಸಾಲಿನವರೆಗೂ ಆಡಿಟ್ ಆಗಿರುತ್ತದೆ. |
| 5 | ತುಳಜಾಪುರ | 2017-18 ರಿಂದ 2022-23 ರ ವರೆಗೆ ಬಾಕಿ ಇರುತ್ತದೆ. | – |

ಸಂಖ್ಯೆ: ಕಂಇ 45 ಮುಸಪ್ರ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.

ಸಂಖ್ಯೆ: ಎಲ್.ಸಿ.ಕ್ಯೂ/ಸಿಆರ್/ 142 /2023-24. ದಿನಾಂಕ:13.02.2024.

ಅನುಬಂಧ

| ಕ್ರ. ಸಂ. | ಹೊರ ರಾಜ್ಯ | ಶ್ರೀ ಕ್ಷೇತ್ರ | ಮುಂಚಿತವಾಗಿ ಕೊಠಡಿಗಳನ್ನು ಕಾಯ್ದಿರಿಸಲು ಅನುಸರಿಸಬೇಕಾದ ಕ್ರಮಗಳು | ಸಂಪರ್ಕಿಸಬೇಕಾದ ಅಧಿಕಾರಿಗಳ ವಿಳಾಸ, ಸಂಪರ್ಕ ಸಂಖ್ಯೆ | ಇ-ಮೇಲ್ ವಿಳಾಸ |
|---|---|---|---|---|---|
| 1. | ಆಂಧ್ರ ಪ್ರದೇಶ | ತಿರುಮಲ | 1) ಆನ್‌ಲೈನ್ Webportal - https://karnatakatemplesaccommodation.com ಮೂಲಕ ಮತ್ತು ಮೊಬೈಲ್ ಆಪ್ : karnatakatemplesaccommodation<br>2) ಮಾನ್ಯ ಮುಖ್ಯ ಮಂತ್ರಿಗಳ/ ಸಚಿವರುಗಳ/ ಶಾಸಕರುಗಳ ಕಛೇರಿ ಗಳಿಂದ ಹಾಗೂ ಸರ್ಕಾರದ ವಿವಿಧ ಇಲಾಖಾ ಅಧಿಕಾರಿಗಳು ನೀಡುವ ಶಿಫಾರಸ್ಸು ಪತ್ರಗಳಿಗೆ ಆದ್ಯತೆಯನ್ನು ನೀಡಲಾಗುತ್ತಿದೆ. | ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಛತ್ರ, ತಿರುಮಲ ಆಂಧ್ರಪ್ರದೇಶ 0877-2277426 ಮತ್ತು ಮೊ.ಸಂಖ್ಯೆ 9448513398 | sokpstirumala@gmail.com |
| | | ತಿರುಚಾನೂರು | ಮಾನ್ಯ ಮುಖ್ಯ ಮಂತ್ರಿಗಳ/ ಸಚಿವರುಗಳ/ ಶಾಸಕರುಗಳ ಕಛೇರಿ ಗಳಿಂದ ಹಾಗೂ ಸರ್ಕಾರದ ವಿವಿಧ ಇಲಾಖಾ ಅಧಿಕಾರಿಗಳು ನೀಡುವ ಶಿಫಾರಸ್ಸು ಪತ್ರಗಳಿಗೆ ಆದ್ಯತೆಯನ್ನು ನೀಡಿ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿದೆ. | | |
| | | ಮಂತ್ರಾಲಯ | ಮಾನ್ಯ ಮುಖ್ಯ ಮಂತ್ರಿಗಳ/ ಸಚಿವರುಗಳ/ ಶಾಸಕರುಗಳ ಕಛೇರಿ ಗಳಿಂದ ಹಾಗೂ ಸರ್ಕಾರದ ವಿವಿಧ ಇಲಾಖಾ ಅಧಿಕಾರಿಗಳು ನೀಡುವ ಶಿಫಾರಸ್ಸು ಪತ್ರಗಳಿಗೆ ಆದ್ಯತೆಯನ್ನು ನೀಡಿ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿದೆ. | ಪತ್ರಾಂಕಿತ ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಛತ್ರ, ಮಂತ್ರಾಲಯ ಕರ್ನೂಲ ಜಿಲ್ಲೆ ಆಂಧ್ರಪ್ರದೇಶ ಮೊ.ಸಂಖ್ಯೆ 6363612501 | Kscmanthralaya@gmail.com |
| | | ಶ್ರೀಶೈಲಂ | ಮಾನ್ಯ ಮುಖ್ಯ ಮಂತ್ರಿಗಳ/ ಸಚಿವರುಗಳ/ ಶಾಸಕರುಗಳ ಕಛೇರಿ ಗಳಿಂದ ಹಾಗೂ ಸರ್ಕಾರದ ವಿವಿಧ ಇಲಾಖಾ ಅಧಿಕಾರಿಗಳು ನೀಡುವ ಶಿಫಾರಸ್ಸು ಪತ್ರಗಳಿಗೆ ಆದ್ಯತೆಯನ್ನು ನೀಡಿ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿದೆ. | ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಛತ್ರ, ಶ್ರೀಶೈಲಂ ನಂದ್ಯಾಲ ಜಿಲ್ಲೆ ಆಂಧ್ರಪ್ರದೇಶ ಮೊ.ಸಂಖ್ಯೆ 9036180790 | - |
| 2. | ಮಹಾರಾಷ್ಟ್ರ | ತುಳಜಾಪುರ | ಮಾನ್ಯ ಮುಖ್ಯ ಮಂತ್ರಿಗಳ/ ಸಚಿವರುಗಳ/ ಶಾಸಕರುಗಳ ಕಛೇರಿ ಗಳಿಂದ ಹಾಗೂ ಸರ್ಕಾರದ ವಿವಿಧ ಇಲಾಖಾ ಅಧಿಕಾರಿಗಳು ನೀಡುವ ಶಿಫಾರಸ್ಸು ಪತ್ರಗಳಿಗೆ ಆದ್ಯತೆಯನ್ನು ಆದ್ಯತೆಯನ್ನು ನೀಡಿ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿದೆ. | ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಛತ್ರ, ಘಾಟಶೀಳಾ ರೋಡ್ ತುಳಜಾಪುರ ಉಸ್ಮಾನಾಬಾದ್ ಜಿಲ್ಲೆ ಮಹಾರಾಷ್ಟ್ರ ಮೊ.ಸಂಖ್ಯೆ 9980647358/ 8970996273 | - |
| 3. | ಉತ್ತರಪ್ರದೇಶ | ವಾರಣಾಸಿ | 1) ಆನ್‌ಲೈನ್ Webportal - https://karnatakatemplesaccommodation.com ಮೂಲಕ ಮತ್ತು ಮೊಬೈಲ್ ಆಪ್ : karnatakatemplesaccommodation<br>2) ಮಾನ್ಯ ಮುಖ್ಯ ಮಂತ್ರಿಗಳ/ ಸಚಿವರುಗಳ/ ಶಾಸಕರುಗಳ ಕಛೇರಿ ಗಳಿಂದ ಹಾಗೂ ಸರ್ಕಾರದ ವಿವಿಧ ಇಲಾಖಾ ಅಧಿಕಾರಿಗಳು ನೀಡುವ ಶಿಫಾರಸ್ಸು ಪತ್ರಗಳಿಗೆ ಆದ್ಯತೆಯನ್ನು ನೀಡಿ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿದೆ. | ವ್ಯವಸ್ಥಾಪಕರು/ಸಹಾಯಕರು ಕರ್ನಾಟಕ ರಾಜ್ಯ ಛತ್ರ, ಹನುಮಾನ್ ಘಾಟ್ ವಾರಣಾಸಿ, ಉತ್ತರ ಪ್ರದೇಶ ಮೊ.ಸಂ: 9026827610 | managerkscvarnasi@gmail.com |

K. Padma